**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ :** ಡಿ.ಇಡಿ., ಕೋರ್ಸನ್ನು ಎನ್.ಸಿ.ಟಿ.ಇ ನಿಯಮಾವಳಿ ಪ್ರಕಾರ D.El.Ed. ಎಂದು ಪದನಾಮೀಕರಣಗೊಳಿಸಲು ಹಾಗೂ D.El.Ed. ಪಠ್ಯಕ್ರಮವನ್ನು ಜಾರಿಗೆ ತರುವ ಬಗ್ಗೆ.

**ಓದಲಾಗಿದೆ :** ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ಬೆಂಗಳೂರು, ಇವರ ಪತ್ರ ಸಂಖ್ಯೆ: ಶಿತ1/ಡಿ.ಇ.ಎಎಲ್.ಇಡಿ/06/2015–16, ದಿನಾಂಕ: 20/01/2016.

<<*****>>

**ಪ್ರಸ್ತಾವನೆ:**

ಮೇಲೆ ಓದಲಾದ ದಿನಾಂಕ : 20/01/2016ರ ಪತ್ರದಲ್ಲಿ ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು, ಇವರು ಕರ್ನಾಟಕ ರಾಜ್ಯದಲ್ಲಿ ಈ ಹಿಂದೆ ಪ್ರಾಥಮಿಕ ಶಿಕ್ಷಕರ ಶಿಕ್ಷಣವನ್ನು ಟಿ.ಸಿ.ಎಚ್., ಎಂಬ ಹೆಸರಿನಲ್ಲಿ ನಡೆಸಲಾಗುತ್ತಿದ್ದೆಂದು, 2002 ರಿಂದ ಈ ಕೋರ್ಸನ್ನು ಡಿ.ಇಡಿ / ಡಿ.ಎಡ್., ಎಂಬ ಹೆಸರಿನಲ್ಲಿ ನಡೆಸಲಾಗುತ್ತಿದೆ ಎಂದು, ಸರ್ಕಾರದ ಆದೇಶ ಸಂಖ್ಯೆ: ಇಡಿ 242 ಪಿಟಿಐ 2012, ದಿನಾಂಕ: 31/12/2012ರನ್ವಯ ಡಿ.ಇಡಿ., ಪಠ್ಯಕ್ರಮವನ್ನು ರಾಷ್ಟ್ರೀಯ ಪಠ್ಯ ಕ್ರಮ ಚೌಕಟ್ಟು 2005, ರಾಷ್ಟ್ರೀಯ ಶಿಕ್ಷಕರ ಶಿಕ್ಷಣ 2009, ಮಕ್ಕಳ ಶಿಕ್ಷಣ ಹಕ್ಕು ಕಾಯಿದೆ 2009 ಮತ್ತು ಡಾ॥ ಸಿ.ಜಿ. ವೆಂಕಟೇಶ ಮೂರ್ತಿ, ಪ್ರಾಧ್ಯಾಪಕರು, ಆರ್.ಐ.ಇ., ಮೈಸೂರು, ವಿವರ ಅಧ್ಯಯನದ ವರದಿಯನ್ನು ಆಧರಿಸಿ 2012ರಲ್ಲಿ ರಾಜ್ಯದಲ್ಲಿ ಡಿ.ಇಡಿ ಪಠ್ಯಕ್ರಮವನ್ನು ಪರಿಷ್ಕರಿಸಲಾಗಿತೆಂದು, ಈ ಪರಿಷ್ಕೃತ ಪಠ್ಯ ಕ್ರಮವನ್ನು 2013–14ರಲ್ಲಿ ಪ್ರಥಮ ಡಿ.ಇಡಿ.ಗೆ, 2014–15ರಲ್ಲಿ ದ್ವಿತೀಯ ಡಿ.ಇಡಿ., ಕೋರ್ಸುಗಳಿಗೆ ಅನುಷ್ಠಾನ ಮಾಡಲಾಗಿದ್ದು, ಈ ಹಂತದಲ್ಲಿ ಪರಿಷ್ಕೃತ ಪಠ್ಯಕ್ರಮ, ಎರಡು ವರ್ಷಗಳಿಗೆ ಬೋಧಕರ ಕೈಪಿಡಿಗಳು, ಮತ್ತು ಎಲ್ಲಾ ವಿಷಯಗಳಿಗೆ ಸಂಪನ್ಮೂಲ ಸಾಹಿತ್ಯ, ಕ್ಲಾಸ್ ಟಾಕ್‌ಗಳನ್ನು ಡಿ.ಎಸ್.ಇ.ಆರ್.ಟಿ ವತಿಯಿಂದ ರಚಿಸಿ ಸಂಬಂಧಿಸಿದ ಡಯಟ್‌ಗಳ ಮೂಲಕ ರಾಜ್ಯದ ಎಲ್ಲಾ ಡಿ.ಇಡಿ. ಕಾಲೇಜುಗಳಿಗೆ ನೀಡಲಾಗಿದ್ದು, ಹಾಗೂ ಉಪನ್ಯಾಸಕರಿಗೆ ಬದಲಾದ ಪಠ್ಯಕ್ರಮದ ಕುರಿತು ಪ್ರತಿ ವರ್ಷವೂ ವಿವಿಧ ತರಬೇತಿಗಳನ್ನು ನೀಡಲಾಗಿದ್ದು, 2012ರಲ್ಲಿ ರಾಜ್ಯದಲ್ಲಿ ರಚಿಸಿದ್ದ ಪರಿಷ್ಕೃತ ಪಠ್ಯಕ್ರಮವು ಬಹುತೇಕ D.El.Ed., ಪಠ್ಯಕ್ರಮಕ್ಕೆ ಹೊಂದಾಣಿಕೆಯಾಗುತ್ತಿದ್ದು, ಹಾಲಿ ಡಿ.ಇಡಿ ಪಠ್ಯಕ್ರಮದೊಂದಿಗೆ ಹೊಂದಾಣಿಕೆ ಆಗುವ ಅಂಶಗಳನ್ನು ಹಾಗೇ ಉಳಿಸಿಕೊಂಡು ಹೊಸದಾಗಿರುವ / ಸೇರಿಲ್ಲದಿರುವ ಪಠ್ಯಭಾಗಗಳನ್ನು ಸೇರಿಸಲು ತಜ್ಞರ ತಂಡ ಶಿಫಾರಸ್ಸುಮಾಡಿದ್ದು, 2015ರಲ್ಲಿ N.C.T.E ನೀಡಿರುವ ಪಠ್ಯಕ್ರಮದ ಅನುಸಾರ ಪ್ರಾಥಮಿಕ ಶಿಕ್ಷಕರ ಶಿಕ್ಷಣ D.El.Ed., ಪಠ್ಯಕ್ರಮ ಕುರಿತು ಜನವರಿ 2015ರಲ್ಲಿ ಪ್ರಕಟಿಸಿರುವ ಪಠ್ಯವಸ್ತುವನ್ನು ಆಧರಿಸಿ, ರಾಜ್ಯದ ತಜ್ಞರ ತಂಡವು ಹಾಲಿ ಡಿ.ಇಡಿ., ಪಠ್ಯಕ್ರಮದಲ್ಲಿ N.C.T.E ತಿಳಿಸಿರುವ ಪಠ್ಯಾಂಶಗಳು ಇರುವ ಮತ್ತು ಇಲ್ಲದಿರುವುದನ್ನು ವಿವರವಾಗಿ ಅಧ್ಯಯನಮಾಡಿ, ಅಂತಿಮವಾಗಿ ಸೇರ್ಪಡೆ ಮಾಡಬೇಕಾದ ಅಗತ್ಯ ಅಂಶಗಳನ್ನು

ಒಳಗೊಂಡ " N.C.T.E,S . D.El.Ed.,2015 and KETEC 2012 curriculum alignment study-A report'' ಎಂಬ ಅಧ್ಯಯನ ವರದಿಯನ್ನು ನೀಡಿದ್ದು, N.C.T.E ಯ ಅಧಿಸೂಚನೆ ಸಂಖ್ಯೆ : 51-01/2014, ದಿನಾಂಕ : 28/11/2014ರಲ್ಲಿ ಡಿ.ಇಡಿ., ಕೋರ್ಸ್‌ನ್ನು D.El.Ed. (Diploma in Elementary Education) ಎಂದು ಹೆಸರಿಸಿದ್ದು, ಪ್ರಸ್ತುತ ರಾಜ್ಯದಲ್ಲಿರುವ ಡಿ.ಇಡಿ/ಡಿ.ಎಡ್ ಎಂದು ಕರೆಯಲ್ಪಟ್ಟಿರುವ ಕೋರ್ಸಿನ ಹೆಸರನ್ನು ಇನ್ನು ಮುಂದೆ D.El.Ed. (Diploma in Elementary Education) ಎಂದು ಬದಲಿಸಲು ಮತ್ತು ರಾಜ್ಯದಲ್ಲಿ D.El.Ed. (Diploma in Elementary Education) ಪಠ್ಯ ಕ್ರಮವನ್ನು ಜಾರಿಗೆ ತರಲು ಆದೇಶ ಹೊರಡಿಸುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

***ಸರ್ಕಾರಿ ಆದೇಶ ಸಂಖ್ಯೆ : ಇಡಿ 59 ಪಿಟಿಐ 2015***

***ಬೆಂಗಳೂರು ದಿನಾಂಕ : 22/06/2016***

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನಲೆಯಲ್ಲಿ ರಾಜ್ಯದ ಪ್ರಾಥಮಿಕ ಶಿಕ್ಷಕರ ಶಿಕ್ಷಣ (ಡಿ.ಇಡಿ. ಡಿಎಡ್) ಕೋರ್ಸ್‌ನ್ನು D.El.Ed. (Diploma in Elementary Education) ಎಂದು ಬದಲಿಸಲು ಹಾಗೂ ಪ್ರಸ್ತುತ ರಾಜ್ಯದಲ್ಲಿ ಜಾರಿಯಲ್ಲಿರುವ ಡಿ.ಇಡಿ/ಡಿ.ಎಡ್ ಪಠ್ಯಕ್ರಮಕ್ಕೆ ಬದಲಾಗಿ D.El.Ed (Diploma in Elementary Education) ಪಠ್ಯಕ್ರಮವನ್ನು ಜಾರಿಗೆ ತರಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,
22/6/16
[ ವಿ. ರಾಮಕೃಷ್ಣಯ್ಯ ]
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ (ಸಾಮಾನ್ಯ)

<u>ಇವರಿಗೆ</u> :-

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
3) ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಕ್ರಾಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು.
4) ನಿರ್ದೇಶಕರು, ಕರ್ನಾಟಕ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯ ನಂ.4, 100 ಅಡಿ ರಿಂಗ್ ರಸ್ತೆ, ಹೊಸಕೆರೆಹಳ್ಳಿ ಬನಶಂಕರಿ 3ನೇ ಹಂತ, ಬೆಂಗಳೂರು.
5) ವಲಯ ನಿರ್ದೇಶಕರು, ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಪರಿಷತ್, ನಾಗರಭಾವಿ, ಜ್ಞಾನಭಾರತಿ ಕ್ಯಾಂಪಸ್ ರಸ್ತೆ, ರಾಷ್ಟ್ರೀಯ ಕಾನೂನು ಶಾಲೆ ಎದುರು, ಬೆಂಗಳೂರು-560072.
6) ವಿಶೇಷಾಧಿಕಾರಿಗಳು, ಎನ್.ವಿ.ಕ್ಯೂ.ಎಫ್. ರಾಜ್ಯ ಸಮಿತಿ, 3ನೇ ಮಹಡಿ ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯ ಕಟ್ಟಡ, 18ನೇ ಕ್ರಾಸ್ ಮಲ್ಲೇಶ್ವರಂ, ಬೆಂಗಳೂರು.
7) ನಿರ್ದೇಶಕರು, (ಪರೀಕ್ಷೆಗಳು), ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು.
8) ಮಾಹಿತಿ ಕೇಂದ್ರ, ಶಿಕ್ಷಣ ಇಲಾಖೆ.
9) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.